SCCH – 01
MVC No.6036/2024
PW3

**ಸಾಕ್ಷಿಗೆ ದಿನಾಂಕಃ 20.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.Vasanthe Gowda ರವರಿಂದಃ**

1) ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) ನ್ಯಾಯಾಲಯವು ಕಳುಹಿಸಿದ್ದ ಸಮನ್ಸ್ ನಲ್ಲಿ ನಮೂದು ಮಾಡಿದ್ದಂತಹ ದಾಖಲೆಗಳನ್ನು ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. ಸಾಕ್ಷಿದಾರರು ಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗಳನ್ನಾಗಿ ಗುರುತಿಸಲಾಯಿತು.

3) ಅನುಮತಿ ಪತ್ರವನ್ನು **ನಿ.ಪಿ.17** ಎಂದು ಗುರುತಿಸಿದೆ.

4) ಓರ್ವ ಪವನ್ ರವರು ನಮ್ಮ ಆಸ್ಪತ್ರೆಗೆ ಯಾವಾಗ ದಾಖಲು ಆಗಿದ್ದಾರೆ ಮತ್ತು ಅವರಿಗೆ ಯಾವ ರೀತಿಯ ಗಾಯಗಳು ಆಗಿದ್ದವು ಮತ್ತು ಆತನಿಗೆ ಯಾವ ರೀತಿಯ ಚಿಕಿತ್ಸೆಯನ್ನು ಕೊಡಲಾಗಿದೆ ಎಂಬ ಎಲ್ಲಾ ಮಾಹಿತಿಗಳನ್ನು ಒಳಗೊಂಡಿರುವಂತಹ ಒಂದು ಫೈಲ್ ಹಾಜರುಪಡಿಸಿದ್ದು ಅದನ್ನು ನಿ.ಪಿ.**18** ಎಂದು ಗುರುತಿಸಿದೆ.

5) **1 X-ray** ಫಿಲಂಅನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.**19** ಎಂದು ಗುರುತಿಸಿದೆ.

<u>**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.KS ವಕೀಲರಿಂದಃ**</u>

1) ನಿ.ಪಿ.**18** ರಲ್ಲಿ ಇರುವಂತಹ ವಿವರಗಳನ್ನು ನಮ್ಮ ಆಸ್ಪತ್ರೆಯ ವೈದ್ಯರು ಬರೆದಿದ್ದಾರೆ. ನಿ.ಪಿ.**18** ರಲ್ಲಿ ಲಭ್ಯ ಇರುವ **Discharge Summary** ದಾಖಲೆಯು ಫೋಟೋ ಪ್ರತಿ ಆಗಿದೆ ಎಂದರೆ ಸರಿ.

2) ಡಾ.ಪ್ರಸಾದ್ ಎನ್ನುವವರು ನಿ.ಪಿ.**18** ದಾಖಲೆಯಲ್ಲಿ ಇರುವ ಮಾಹಿತಿಗಳನ್ನು ಬರೆದಿದ್ದಾರೆ ಮತ್ತು ಸದರಿ ವೈದ್ಯರು ನಮ್ಮ ಆಸ್ಪತ್ರೆಯಲ್ಲಿಯೇ ಇವತ್ತಿಗೂ ಸಹಾ ಕರ್ತವ್ಯ ಮಾಡುತ್ತಿದ್ದಾರೆ. ನಿ.ಪಿ.**18** ರಲ್ಲಿ ಇರುವಂತಹ ಸಿ.ಟಿ.**Scan** ವರದಿಯೂ ಸಹಾ ಫೋಟೋ ಪ್ರತಿ ಆಗಿದೆ ಎಂದರೆ ಸರಿ.

SCCH – 01
MVC No.6036/2024
PW3

3) ಅರ್ಜಿದಾರರಾದ ಪವನ್ ರವರಿಗೆ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ನಾನು ನಿ.ಪಿ.**18** ಮತ್ತು **19** ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.